ಕರ್ನಾಟಕ ಸರ್ಕಾರ

## ಕಾಲೇಜು ಶಿಕ್ಷಣ ಇಲಾಖೆ

# "ಕನ್ನಡ ಕಾಯಕ ವರ್ಷ ೨೦೨೦-೨೧"

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು.

ಸಂಖ್ಯೆ: ಕಾಶಿಇ/ಶೈವಿ/06/ಸುತ್ತೋಲೆ/2020-21
ದಿನಾಂಕ: 15.01.2021.

## <u>ಸುತ್ತೋಲೆ</u>

**ವಿಷಯ:** 1 ನೇ ನವೆಂಬರ್ 2020 ರಿಂದ 31ನೇ ಅಕ್ಟೋಬರ್ 2021 ರವರೆಗೆ "ಕನ್ನಡ ಕಾಯಕ ವರ್ಷಾಚರಣೆ" ಆಚರಿಸುವ ಕುರಿತು.

**ಉಲ್ಲೇಖ:**
1. ಸರ್ಕಾರದ ಪತ್ರ ಸಂಖ್ಯೆ: ಇಡಿ 69 ವಿವಿಧ 2020 ಬೆಂಗಳೂರು ದಿನಾಂಕ:19.12.2020.
2. ಶ್ರೀ ಟಿ. ಎಸ್. ನಾಗಾಭರಣ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರವರ ಅ.ಸ.ಪತ್ರ ಸಂಖ್ಯೆ:ಕಅಪ್ರಾ/ಅ/434/2020 ದಿನಾಂಕ:21.11.2020.

********

'ಕನ್ನಡ' ರಾಜ್ಯದ ಅಧಿಕೃತ ಆಡಳಿತ ಭಾಷೆ. ಸಚಿವಾಲಯದಿಂದ ಹಿಡಿದು ಗ್ರಾಮಪಂಚಾಯಿತಿ ಕಛೇರಿಯೂ ಸೇರಿದಂತೆ ಎಲ್ಲೆಡೆ, ಸರ್ಕಾರಿ ಕಛೇರಿಗಳ ಆಡಳಿತ ವ್ಯವಸ್ಥೆಯಲ್ಲಿ ಕನ್ನಡವನ್ನು ಪ್ರಧಾನವಾಗಿ ಬಳಸುವಂತಾಗಬೇಕು ಎಂಬುದು ಸರ್ಕಾರದ ಭಾಷಾನೀತಿ. ಈ ನೀತಿಯ ಅನುಷ್ಠಾನಕ್ಕೆಂದು ಕಾಲಕಾಲಕ್ಕೆ ರಾಜ್ಯ ಸರ್ಕಾರ ಅನೇಕ ಕ್ರಮಗಳನ್ನು, ಆದೇಶಗಳನ್ನು ಆಜ್ಞೆಗಳನ್ನು ಹೊರಡಿಸಿದೆ. ಆಡಳಿತ ವ್ಯವಸ್ಥೆಯಲ್ಲಿ ಇ-ಕಛೇರಿ ತಂತ್ರಜ್ಞಾನದಲ್ಲಿ ಕನ್ನಡ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಬೇಕು ಎಂಬುದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಉದ್ದೇಶವಾಗಿದೆ.

ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮ ಭಾಷೆಯಾಗಿದ್ದು, ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ರಾಜ್ಯೋತ್ಸವ ದಿನದಂದು ಅಧಿಕೃತವಾಗಿ 2020-21ರ ಕನ್ನಡ ಕಾಯಕ ವರ್ಷಾಚರಣೆಯನ್ನು ಘೋಷಿಸಿರುತ್ತಾರೆ. ಈ ನಿಮಿತ್ತ ಪ್ರಸ್ತುತ ಕರೋನೋತ್ತರ ಕರ್ನಾಟಕದಲ್ಲಿ ಎಲ್ಲ ವಲಯಗಳಲ್ಲಿ ಜೀವನೋತ್ಸಾಹ ತುಂಬುವ ಮೂಲಕ ಭವಿಷ್ಯದ ಕನ್ನಡವನ್ನು ಕಟ್ಟುವ ದೃಷ್ಟಿಯಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ **1ನೇ ನವೆಂಬರ್ 2020 ರಿಂದ 31ನೇ ಅಕ್ಟೋಬರ್ 2021ರವರೆಗೆ "ಕನ್ನಡ ಕಾಯಕ ವರ್ಷಾಚರಣೆ" ಯನ್ನು ಇಡೀ ವರ್ಷ ಹಮ್ಮಿಕೊಳ್ಳಲು** ಈ ಕೆಳಕಂಡ ಪ್ರಮುಖ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ.

ಅ) ಭವಿಷ್ಯದ ಕನ್ನಡದ ದೃಷ್ಟಿಯಿಂದ ಆಡಳಿತದ ಎಲ್ಲ ವಲಯಗಳಲ್ಲಿ ಕನ್ನಡಪರ ಆದೇಶಗಳನ್ನು ಸಮರ್ಪಕವಾಗಿ ಕಾರ್ಯಗತಗೊಳಿಸುವುದು.

ಆ) ಇ-ಕಛೇರಿ ಹಾಗೂ ತಂತ್ರಜ್ಞಾನದಲ್ಲಿ ಕನ್ನಡವನ್ನು ಸಮರ್ಪಕವಾಗಿ ಬಳಸಲು ಕಾರ್ಯಕ್ರಮಗಳನ್ನು ರೂಪಿಸುವುದು.

ಇ) ನೂತನ ಶಿಕ್ಷಣ ನೀತಿಯನ್ವಯ ಉನ್ನತ ಶಿಕ್ಷಣದಲ್ಲಿ ಕನ್ನಡವನ್ನು ಹಂತ ಹಂತವಾಗಿ ಜಾರಿಗೊಳಿಸಲು ಕಾರ್ಯಕ್ರಮ ರೂಪಿಸುವುದು.

ಮು.ತಿ.ನೋ.

ಈ) ಸರ್ಕಾರಿ ಮುದ್ರಣಾಲಯ ಹಾಗೂ ಸರ್ಕಾರಿ ಇಲಾಖೆಗಳು ಮುದ್ರಿಸುವ ತಲೆಬರಹಗಳು (ಲೆಟರ್ ಹೆಡ್)ನಮೂನೆಗಳು, ಪೂರಕ ಸಾಮಗ್ರಿಗಳು, ಪ್ರಕಟಣೆಗಳು, ಜಾಹಿರಾತುಗಳಲ್ಲಿ **"ಕನ್ನಡ ಕಾಯಕ ವರ್ಷ ೨೦೨೦-೨೧"** ರ ಲಾಂಛನವನ್ನು ಬಳಸುವುದು.

ಮುಂದುವರೆದು, ಈ ಕನ್ನಡ ಕಾಯಕ ವರ್ಷಾಚರಣೆಯನ್ನು ನಿಷ್ಠೆಯಿಂದ ಕಾರ್ಯಗತ ಮಾಡಲು ಸಮಗ್ರ ಕನ್ನಡ ಅನುಷ್ಠಾನ ಹಾಗೂ ಬಳಕೆಯನ್ನು ಪ್ರೋತ್ಸಾಹಿಸಲು ಅನುಬಂಧ-1 ರಲ್ಲಿ ಲಗತ್ತಿಸಿರುವ ಕ್ರಮಗಳನ್ನು ಅನುಷ್ಠಾನಗೊಳಸಲು ಸೂಚಿಸಲಾಗಿದೆ.

ಆಯುಕ್ತರು
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ

<u>ಇವರಿಗೆ:</u>

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಕಲಬುರಗಿ.
3. ಕೇಂದ್ರ ಕಛೇರಿಯ ಎಲ್ಲಾ ವಿಭಾಗದ ಮ್ಯಾನೇಜರ್ / ಅಧೀಕ್ಷಕರುಗಳಿಗೆ – ಅಗತ್ಯ ಕ್ರಮಕ್ಕಾಗಿ.
4. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಲಾಗಿದೆ

<u>ಪ್ರತಿಯನ್ನು:</u>

5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ) ಬಹುಮಹಡಿಗಳ ಕಟ್ಟಡ, ಬೆಂಗಳೂರು.
6. ಶ್ರೀ ಟಿ. ಎಸ್. ನಾಗಾಭರಣ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕೊಠಡಿ ಸಂಖ್ಯೆ: 205ಎ, 206, 2ನೇ ಮಹಡಿ, ವಿಧಾನಸೌಧ, ಬೆಂಗಳೂರು – 560 001.
7. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯಆಡಳಿತಾಧಿಕಾರಿಗಳು ಹಾಗೂ ಜಂಟಿ ನಿರ್ದೇಶಕರುಗಳ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
8. ಕಛೇರಿ ಪ್ರತಿ.

ಅನುಬಂಧ-1

2. <u>ಉನ್ನತ ಶಿಕ್ಷಣ ಇಲಾಖೆ:</u>

1. ಪ್ರೊ.ಹಿ.ಚಿ.ಬೋರಲಿಂಗಯ್ಯನವರ ವರದಿ ಅನ್ವಯ ರಾಜ್ಯದ ಪದವಿ ಹಂತದ ಎಲ್ಲಾ ಪ್ರಕಾರದ ಶಿಕ್ಷಣದಲ್ಲಿ (ವೃತ್ತಿ ಶಿಕ್ಷಣದಲ್ಲಿ 2 ಸೆಮಿಸ್ಟರ್) ಕನ್ನಡವನ್ನು ಒಂದು ಭಾಷೆಯಾಗಿ ನಾಲ್ಕು ಸೆಮಿಷ್ಟರ್ ಗಳಿಗೆ ಕಲಿಸುವುದು.
2. ಸರ್ಕಾರದ ಭಾಷಾ ವಿಷಯದ ಅನುಷ್ಠಾನಕ್ಕಾಗಿ ಡೀಮ್ಡ್/ಸ್ವಾಯತ್ತ/ಖಾಸಗಿ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳನ್ನು ಆಯಾ ವೃತ್ತಿಪರ ವಿಶ್ವವಿದ್ಯಾಲಯಗಳ ಅಧೀನಕ್ಕೆ ತಂದು ಭಾಷಾ ಕಲಿಕೆಯನ್ನು ಕಡ್ಡಾಯಗೊಳಿಸುವುದು.
3. ಪದವಿ ಕಾಲೇಜುಗಳಿಗೆ ಪ್ರವೇಶಾತಿ ನೀಡುವಾಗ ಕನ್ನಡ ಕಲಿಕಾ ಹಿತದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ/ಪಿಯುಸಿಯಲ್ಲಿ ವ್ಯಾಸಾಂಗ ಮಾಡಿರುವ ಭಾಷಾ ಮಾಧ್ಯಮವನ್ನು ಪರಿಗಣಿಸಿ ದಾಖಲಾತಿಯನ್ನು ನೀಡಲು ಅವಕಾಶ ಒದಗಿಸುವುದು.
4. ಪ್ರೊ.ಹಿ.ಚಿ.ಬೋರಲಿಂಗಯ್ಯನವರ ವರದಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ವೃತ್ತಿಪರ ಕಾಲೇಜು/ವಿಶ್ವವಿದ್ಯಾಲಯಗಳಲ್ಲಿ ಪ್ರತ್ಯೇಕ ಕನ್ನಡ ವಿಭಾಗವನ್ನು ತೆರೆಯುವುದು.
5. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಉತ್ತೇಜಿಸುವ ದೃಷ್ಟಿಯಿಂದ ಎಲ್ಲಾ ಪದವಿ ಕಾಲೇಜುಗಳಲ್ಲಿ ಐಚ್ಛಿಕ ಕನ್ನಡ ವಿಷಯದಲ್ಲಿನ ವಿದ್ಯಾರ್ಥಿಗಳ ಕನಿಷ್ಠ ಸಂಖ್ಯೆಯನ್ನು 5ಕ್ಕೆ ನಿಗದಿಗೊಳಿಸಿ ತರಗತಿಗಳನ್ನು ನಡೆಸುವುದು.
6. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ನಡ ಭಾಷೆಯ ಜೊತೆಗೆ ಮಕ್ಕಳಿಗೆ ವಿವಿಧ ಆಧುನಿಕ ವಿಷಯಗಳ ಸಂಯೋಜನೆಯನ್ನು ನೀಡುವುದು.
7. ಕೇಂದ್ರ ಸರ್ಕಾರ ನಡೆಸುವ ವಿವಿಧ ಮಾದರಿಯ ಪರೀಕ್ಷೆಗಳಿಗೆ/ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಆ ಮೂಲಕ ಕನ್ನಡಿಗರು ಹೆಚ್ಚು ಹೆಚ್ಚು ಉದ್ಯೋಗಗಳನ್ನು ಪಡೆಯಲು ಪ್ರೇರೇಪಿಸುವುದು.
8. ಉನ್ನತ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಬಯಸುವ ಎಲ್ಲಾ ಹಂತಗಳಲ್ಲಿ ಶಿಕ್ಷಣ ಮಾಧ್ಯಮ ಕನ್ನಡದಲ್ಲಿರಬೇಕು ರಾಜ್ಯ ಸರ್ಕಾರ ಕನ್ನಡ ಮಾಧ್ಯಮದಲ್ಲಿ ಉನ್ನತ ಶಿಕ್ಷಣ ನೀಡುವುದಕ್ಕೆ ಪೂರಕವಾದ ಅಗತ್ಯ ಕಾನೂನು/ ನಿಯಮಗಳನ್ನು ರೂಪಿಸಬೇಕು. ವೃತ್ತಿ ಶಿಕ್ಷಣದ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯ ಆಧಾರಿತ ಶಿಕ್ಷಣ ನೀಡುವುದರಿಂದ ಆ ಕೌಶಲ್ಯವನ್ನು ಕನ್ನಡ ಮಾಧ್ಯಮದಲ್ಲಿ ನೀಡುವ ನಿಟ್ಟಿನಲ್ಲಿ ಹೆಚ್ಚು ಒತ್ತುಕೊಡಲು ಕ್ರಮವಹಿಸಬೇಕು.
9. ನಿರ್ಮಾಣ ಚಟುವಟಿಕೆಗೆ ಅಗತ್ಯವಾದ ಕಸುಬುಗಳಾದ ಕಂಬಿ ಬಾಗಿಸುವಿಕೆ (Bar Bending), ಗಾರೆ ಕೆಲಸ (Masonary), ಮರ ಗೆಲಸ (Shuttering Carpentry), ಕೊಳಾಯಿ ಕೆಲಸ (Plumbing), ಬಣ್ಣ ಬಳೆಯುವ ಕೆಲಸ (Painting), ಸಾರವೆ ಅಟ್ಟದ ಕೆಲಸ (Scaffolding) ಗಳ ತರಬೇತಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕೌಶಲ್ಯ ಅಭಿವೃದ್ಧಿ ತರಬೇತಿ ಕೇಂದ್ರಗಳಾದ ಬೆಂಗಳೂರು, ಬೆಳಗಾವಿ, ಕಲಬುರ್ಗಿ ಹಾಗೂ ಮೈಸೂರು ವಿಭಾಗೀಯ ಕೇಂದ್ರಗಳ ಮೂಲಕ ಈ ಕೆಳಗಿನ ಕೋರ್ಸ್‌ಗಳನ್ನು ಪ್ರಾರಂಭಿಸಿ ತರಬೇತಿ ನೀಡುವುದು.
10. ಇಲಾಖೆಗಳಲ್ಲಿನ ಜಾಲ ತಾಣ/ಸಾಮಾಜಿಕ ತಾಣ/ಪ್ರಧಾನ ಪುಟ (ಡಿಫಾಲ್ಟ್ ಪೇಜ್) ಕನ್ನಡದಲ್ಲಿ ರೂಪಿಸುವುದು ಮತ್ತು ಒಳಪುಟದ ಮಾಹಿತಿಗಳೆಲ್ಲವು ಕನ್ನಡದಲ್ಲಿ ಇರತಕ್ಕದ್ದು.
11. ರಾಜ್ಯದೊಳಗಿನ ಎಲ್ಲಾ ಪತ್ರವ್ಯವಹಾರಗಳು ಕಡ್ಡಾಯವಾಗಿ ಕನ್ನಡದಲ್ಲಿಯೇ ಇರತಕ್ಕದ್ದು.
12. ಆಡಳಿತಕ್ಕೆ ಸಂಬಂಧಿಸಿದಂತೆ ಪತ್ರ ವ್ಯವಹಾರಗಳು, ಕಡತಗಳ ನಿರ್ವಹಣೆ, ತಂತ್ರಾಂಶಗಳ ಅಳವಡಿಕೆ, ಅಂತರ್ಜಾಲ ತಾಣ, ಸಾಮಾಜಿಕ ಜಾಲತಾಣ, ಯೋಜನೆಗಳ ಪ್ರಚಾರ ಜಾಹಿರಾತು ಇತ್ಯಾದಿ ಎಲ್ಲಾ ಕಛೇರಿ ವ್ಯವಹಾರಗಳಲ್ಲಿ ಕಡ್ಡಾಯವಾಗಿ ಕನ್ನಡ ಯುನಿಕೋಡ್ ತಂತ್ರಾಂಶವನ್ನೇ ಬಳಸತಕ್ಕದ್ದು.

13. ಸುತ್ತೋಲೆ, ಆದೇಶ, ಸೂಚನಾ ಪತ್ರಗಳು, ಅಧಿಕೃತ ಜ್ಞಾಪನ, ಅಧಿಸೂಚನೆ, ನಡವಳಿಗಳೆಲ್ಲವನ್ನೂ ಕಡ್ಡಾಯವಾಗಿ ಕನ್ನಡದಲ್ಲಿ ಹೊರಡಿಸತಕ್ಕದ್ದು.
14. ಎಲ್ಲಾ ಕಾಗದಗಳ ತಲೆಬರಹಗಳು (ಲೆಟರ್ ಹೆಡ್) / ವಿಸಿಟಿಂಗ್ ಕಾರ್ಡ್‌ಗಳು, ಮೊಹರುಗಳು, ಲೆಕ್ಕಪತ್ರಗಳು ಮತ್ತು ಎಲ್ಲಾ ವಹಿಗಳು ಕನ್ನಡದಲ್ಲಿರತಕ್ಕದ್ದು.
15. ವಿಶ್ವವಿದ್ಯಾಲಯದಲ್ಲಿ ಕನ್ನಡ ಅನುಷ್ಠಾನ ವಿಭಾಗವನ್ನು ರಚನೆ ಮಾಡಿ ಕನ್ನಡ ಅನುಷ್ಠಾನದ ಪ್ರಗತಿ ವಿವರವನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸುವುದು.
16. ಕನ್ನಡ ಅಭಿವೃದ್ಧಿಯ ಉದ್ದೇಶಗಳನ್ನು ನೆರವೇರಿಸಲು ಜವಾಬ್ದಾರನ್ನಾಗಿ ಮಾಡಿರುವ ಅಧಿಕಾರಿಗಳು ಸರ್ಕಾರದ ಸುತ್ತೋಲೆ ಡಿಪಿಎಆರ್ 24 ಪಿಬಿಎಲ್ 80, ದಿನಾಂಕ:5-1-1982ರನ್ವಯ ಅಧೀನ ಕಛೇರಿ /ಶಾಖೆಗಳ ತನಿಖೆ ಮಾಡಿ ಕನ್ನಡ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತನಿಖಾ ವರದಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸುವುದು.
17. ವಾರ್ಷಿಕ ಆಡಳಿತ ವರದಿಗಳು, ವಾರ್ಷಿಕ ವರದಿಗಳು, ಆಯವ್ಯಯ ದಾಖಲೆಗಳು ಮತ್ತು ಇತರೆ ಎಲ್ಲಾ ಅಗತ್ಯ ದಾಖಲೆಗಳು ಕನ್ನಡದಲ್ಲಿತಕ್ಕದ್ದು, ಹಾಗೂ ವಾರ್ಷಿಕ ವರದಿಗಳ ಪ್ರತಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸುವುದು.
18. ಕನ್ನಡ ಅನುಷ್ಠಾನದ ಪ್ರಗತಿ ವರದಿಯನ್ನು ಪ್ರತಿ ತಿಂಗಳು 5ನೇ ತಾರೀಖಿನ ಒಳಗೆ ನಿಗದಿತ ನಮೂನೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.
19. ಇ-ಟೆಂಡರ್ ದರಪಟ್ಟಿಗಳೆಲ್ಲವನ್ನು ಕಡ್ಡಾಯವಾಗಿ ಕನ್ನಡದಲ್ಲೂ ನೀಡತಕ್ಕದ್ದು.
20. ಪ್ರತಿ ತಿಂಗಳು ನಡೆಯುವ ಪ್ರಗತಿ ಪರಿಶೀಲನಾಸಭೆ (ಎಂ.ಎಂ.ಆರ್.)ಯಲ್ಲಿ ಕನ್ನಡ ಅನುಷ್ಠಾನ ಪ್ರಗತಿಯ ವಿಷಯವನ್ನು ಪ್ರಮುಖವಾಗಿ ಚರ್ಚಿಸಿ ಅದರ ನಡವಳಿಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸುವುದು.
21. ನಾಮಫಲಕಗಳಲ್ಲಿ ಕನ್ನಡವನ್ನು ಪ್ರಧಾನವಾಗಿ ಅಂದರೆ ಶೇ.60ರಷ್ಟು ಭಾಗ ಕನ್ನಡವನ್ನು ಬಳಸತಕ್ಕದ್ದು. ಪರವಾನಿ ನೀಡುವ ಸಂದರ್ಭದಲ್ಲಿ ಕಡ್ಡಾಯವಾಗಿ ಕನ್ನಡದ ನಾಮಫಲಕ ಅಳವಡಿಸುವಂತೆ ಷರತ್ತು ವಿಧಿಸಿ ಅನುಪಾಲನಗೆ ಕ್ರಮವಹಿಸುವುದು.
22. ಡಾ.ಸರೋಜಿನಿ ಮಹಿಷಿ ವರದಿಯನ್ವಯ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಸಂಸ್ಥೆ / ಕಾರ್ಖಾನೆಗಳಲ್ಲಿ ಉದ್ದಿಮೆಗಳಲ್ಲಿ ಸಿ ಮತ್ತು ಡಿ ವೃಂದದ ನೌಕರನ್ನು ಗುತ್ತಿಗೆ /ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವಾಗ ಕಡ್ಡಾಯವಾಗಿ ಕನ್ನಡಿಗರಿಗೆ ಶೇ.100ರಷ್ಟು ಮೀಸಲಾತಿ ನೀಡುವುದು. ಪ್ರತಿ ತಿಂಗಳಿಗೊಮ್ಮೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ನಿರ್ದೇಶಕರು/ ಉಪನಿರ್ದೇಶಕರುಗಳು ಎಲ್ಲಾ ಇಲಾಖೆಗಳಿಂದ ಮಾಹಿತಿಯನ್ನು ಸಂಗ್ರಹಿಸಿ ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸುವುದು.
23. ಕನ್ನಡ ದಿನಪತ್ರಿಕೆಗಳಿಗೆ ಕನ್ನಡದಲ್ಲಿಯೇ ಕಡ್ಡಾಯವಾಗಿ ಜಾಹೀರಾತುಗಳನ್ನು ನೀಡುವುದು.
24. ಆಯಾ ಇಲಾಖೆಗಳ ಕಾರ್ಯ-ವ್ಯೆಖರಿಗೆ ಸಂಬಂಧಿಸಿದಂತೆ ಕನ್ನಡ ಪಾರಿಭಾಷಿಕ ಪದಕೋಶಗಳನ್ನು ಪ್ರಕಟಿಸಿ ಅವುಗಳ ಒಂದು ಪ್ರತಿಯನ್ನು ಪ್ರಾಧಿಕಾರಕ್ಕೆ ಸಲ್ಲಿಸುವುದು.
25. ರಾಜ್ಯ ಸರ್ಕಾರದ ಅಧೀನ ಬರುವ ಹಾಗೂ ರಾಜ್ಯ ಸರ್ಕಾರದಿಂದ ನಿಗದಿತ ವಾರ್ಷಿಕ ಅನುದಾನ ಪಡೆಯುವ ಎಲ್ಲಾ ಕಛೇರಿಗಳು/ ಸಂಸ್ಥೆಗಳು/ ಇಲಾಖೆಗಳ ವೃಂದ ಮತ್ತು ನೇಮಕಾತಿ ನಿಯಮಗಳು ಕನ್ನಡದಲ್ಲಿರುವಂತೆ ಕ್ರಮವಹಿಸುವುದು.
26. ಕಾಯ್ದೆ-ಕಾನೂನುಗಳು, ಶಾಸನಗಳು, ವಿಧೇಯಕಗಳು, ಸಚಿವ ಸಂಪುಟ ಟಿಪ್ಪಣಿಗಳು, ಅಧಿಸೂಚನೆಗಳು, ಇವುಗಳಿಗೆ ತರಬಹುದಾದ ಎಲ್ಲ ತಿದ್ದುಪಡಿಗಳು ಕನ್ನಡದಲ್ಲಿಯೇ ಕಡ್ಡಾಯವಾಗಿ ಹೊರಡಿಸುವುದು.

27. ತಂತ್ರಜ್ಞಾನಾಧಾರಿತ ಆಡಳಿತ ವ್ಯವಸ್ಥೆಯ ಮೂಲಕ ಅರ್ಜಿದಾರರಿಗೆ/ಫಲಾನುಭವಿಗಳಿಗೆ ಹೋಗುವ ಸ್ವೀಕೃತಿ ಸಂದೇಶಗಳು ಕನ್ನಡದಲ್ಲಿ ತಲುಪುವಂತೆ ಕ್ರಮವಹಿಸುವುದು.

28. ವಿಡಿಯೋ ಕಾನ್ಫರೆನ್ಸ್ ಸಭೆಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ನಡೆಸುವುದು (ವಿಶೇಷವಾಗಿ ಅಧಿಕಾರಿ/ನೌಕರರ ಸಂವಹನ).

29. ಹೊರನಾಡು/ಗಡಿನಾಡು ಕನ್ನಡಿಗರ ಮಕ್ಕಳಿಗೆ ರಾಜ್ಯ ಸರ್ಕಾರದಿಂದ ಸಿಗಬಹುದಾದ ಎಲ್ಲ ಸೌಲಭ್ಯಗಳನ್ನು ಒದಗಿಸುವುದು ಮತ್ತು ಈ ಬಗ್ಗೆ ಆ ವಲಯದ ಮಕ್ಕಳ ಪಾಲಕರಿಗೆ ತಿಳುವಳಿಕೆ ಮೂಡಿಸುವುದು.